



ಎದ್ದು ಬಂದ ಹಾಗೆ ಕಾಣಿಸುತ್ತಾರೆ. ಅವರು ಈ ಸಂದೇಶವನ್ನು ನಮಗೆ ನೀಡುವಂತಿದೆ : "ನನ್ನ ಮಾತೃಭೂಮಿಗಾಗಿ ನಾನು ಮಾಡಬೇಕಾದ ಕಾರ್ಯವು ಇನ್ನೂ ಮುಗಿದಿಲ್ಲ. ನಾನು ಪಾಶ್ಚಾತ್ಯ ರಾಷ್ಟ್ರಗಳಿಗೆ ನೀಡಬೇಕಾದ ಸಂದೇಶವನ್ನು ಇನ್ನೂ ಸಂಪೂರ್ಣವಾಗಿ ನೀಡಿಲ್ಲ. ಅವು ಮುಗಿಯುವವರೆಗೆ ನನಗೆ ವಿಶ್ರಾಂತಿಯಿಲ್ಲ. ಯಾರು ತನ್ನ ವೈಯಕ್ತಿಕ ಮುಕ್ತಿಯ ಕಡೆಗೆ ಲಕ್ಷ್ಯ ಕೊಡದೆ ಇತರರಿಗೆ ನೆರವಾಗುವನೋ, ಇತರರ ಸೇವೆ ಮಾಡುವನೋ, ಅವರ ಸೇವಕ ನಾನು."

**ಛಾಯಾಚಿತ್ರ ೬೨:** ಪಾಶ್ಚಾತ್ಯ ದೇಶಗಳಲ್ಲಿ ತಮ್ಮ ಜೈತ್ರಯಾತ್ರೆಯ ತರುವಾಯ, ಮೊಟ್ಟಮೊದಲ ಬಾರಿಗೆ ಸ್ವಾಮಿ ವಿವೇಕಾನಂದರು ತಮ್ಮ ತವರೂರಾದ ಕೊಲ್ಕತಾಗೆ ಬಂದಾಗ ಅವರಿಗೆ ವಿಜೃಂಭಣೆಯ ಸ್ವಾಗತ ನೀಡಲಾಯಿತು. ೧೮೯೭ರ ಫೆಬ್ರವರಿ ೨೮ನೇ ತಾರೀಖು, ಕೊಲ್ಕತಾ ನಗರದ ನಾಗರಿಕರ ಪರವಾಗಿ ಅಭೂತಪೂರ್ವ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಯಿತು. ಅದರ ಛಾಯಾಚಿತ್ರ ಇದು.


ಮಾರನೆಯ ದಿವಸ, ಅಂದರೆ ೧೮೯೭, ಮಾರ್ಚ್ ೧ರಂದು ಅಮೃತಬಜಾರ್ ಪತ್ರಿಕೆಯು ಸ್ವಾಮೀಜಿಯವರಿಗೆ ನೀಡಲಾದ ಸಾರ್ವಜನಿಕ ಸತ್ಕಾರದ ಸುದ್ದಿಯನ್ನು ಹೀಗೆ ಪ್ರಕಟಿಸಿತು: "ರಾಜಾ ಸರ್ ರಾಧಾಕಾಂತ ದೇವ್ ಅವರ ಬಂಗಲೆಯ ಮುಂದಿರುವ ಪ್ರಾಂಗಣದಲ್ಲಿ ಸ್ವಾಗತ ಸಮಾರಂಭ ನಡೆಯಿತು. ಹಿಂದೆ ಆದಂತೆ ನೂಕುನುಗ್ಗಲುಗಳನ್ನು ತಡೆಯಲು, ಈ ಸಲ ಎಲ್ಲ ವ್ಯವಸ್ಥೆಗಳನ್ನೂ ಮಾಡಲಾಗಿತ್ತು. ಟಿಕೆಟ್ಟಿನ ಮೂಲಕ ಪ್ರವೇಶವನ್ನು ನಿಗದಿ ಮಾಡಲಾಗಿತ್ತು. ಆದರೆ ಟಿಕೆಟ್ಟಿಗೆ ಯಾವುದೇ ರೀತಿಯ ಶುಲ್ಕವಿರಲಿಲ್ಲ. ಭಾಗವಹಿಸುವವರು ಟಿಕೆಟ್ಟನ್ನು ಮುಂಚೆಯೇ ಪಡೆದಿರಬೇಕಾಗಿತ್ತು.

ಭಾನುವಾರ ಮಧ್ಯಾಹ್ನ ನಾಲ್ಕು ಗಂಟೆಗೆ ಕಾರ್ಯಕ್ರಮ ಆರಂಭವಾಯಿತು. ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ವೇದಿಕೆಯ ಮೇಲೆ ಆಸೀನರಾಗಿದ್ದ ಗಣ್ಯರಲ್ಲಿ ಕೆಲವರೆಂದರೆ, ರಾಜ ರಾಜೇಂದ್ರ, ನಾರಾಯಣ ದೇವ್ ಬಹದ್ದೂರ್, ನ್ಯಾಯಮೂರ್ತಿ ಚಂದ್ರಮಾಧವ ಘೋಷ್, ಮಹಾರಾಜ ಪ್ಯಾರಿಮೋಹನ್ ಮುಖರ್ಜಿ ಮುಂತಾದವರು. ರಾಜ ವಿನಯ್ ಕೃಷ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅವರು ನಾಲ್ಕು ಮಾತನಾಡಿ, ಬಿನ್ನವತ್ತಳೆಯನ್ನು ಓದಿದರು. ಅನಂತರ ಈ ಬಿನ್ನವತ್ತಳೆಯನ್ನು ಬೆಳ್ಳಿಯ ಕರಂಡಕದಲ್ಲಿಟ್ಟು ಸ್ವಾಮೀಜಿಯವರಿಗೆ ಅರ್ಪಿಸಲಾಯಿತು. ಇದಾದ ಮೇಲೆ, ತಮಗೆ ನೀಡಿದ ಸತ್ಕಾರಕ್ಕೆ ಉತ್ತರವನ್ನು ನೀಡಲು ಸ್ವಾಮೀಜಿ ಎದ್ದುನಿಂತರು. ಆಗ ಎಲ್ಲ ಕಡೆ ಕರತಾಡನದ ಶಬ್ದ ಕೇಳಿಬಂತು. ಸ್ವಾಮೀಜಿ ತಮ್ಮ ಭಾಷಣದ ಪ್ರಾರಂಭದಲ್ಲಿ ಹೇಳಿದ ಮಾತುಗಳು ಇವು: **"ಇಲ್ಲಿಗೆ ಬರುವುದಕ್ಕಿಂತ ಮುಂಚೆ ಭರತ ಖಂಡವನ್ನು ಪ್ರೀತಿಸುತ್ತಿದ್ದೆ. ಈಗ ನನಗೆ ಭಾರತ ಭೂಮಿಯ ಧೂಳು ಕೂಡ ಪವಿತ್ರವಾಗಿದೆ, ಬೀಸುವ ಗಾಳಿ ಪವಿತ್ರವಾಗಿದೆ, ಈ ಪುಣ್ಯಭೂಮಿ ನನ್ನ ತೀರ್ಥಕ್ಷೇತ್ರವಾಗಿದೆ."**

# ಗರುಡ ಕಲಿತ ಪಾಠ

**ಕಥೆ :** ಕೆ. ಸರಸ್ವತಿ    **ಚಿತ್ರ :** ಶಂಕರ್

**1** ಮಹಾವಿಷ್ಣುವು ಶ್ರೀರಾಮನಾಗಿ ಅವತಾರವೆತ್ತಿದ್ದಾನೆ. ಸೀತೆಯನ್ನು ಮತ್ತೆ ಪಡೆದುಕೊಳ್ಳಲು ಅವನು ಶ್ರೀಲಂಕೆಯ ಮೇಲೆ ದಾಳಿ ನಡೆಸಿದನು. ಒಂದು ದಿನ ರಾವಣನ ಮಗ ಇಂದ್ರಜಿತ್ತು ರಾಮನ ವಿರುದ್ಧ ಯುದ್ಧಮಾಡಲು ಬಂದನು.





**2** ಸರ್ಪಾಸ್ತ್ರವು ಶ್ರೀರಾಮನನ್ನು ಘಾತಿಸಿತು. ಅವನು ಪ್ರಜ್ಞೆ ತಪ್ಪಿ ಕೆಳಕ್ಕೆ ಬಿದ್ದನು. ಇದನ್ನು ನಾರದನು ಗಮನಿಸಿದನು.




**3** ನಾರದನು ವೈಕುಂಠಕ್ಕೆ ಧಾವಿಸಿ ಹೋದನು.




**4** ಒಡನೆ ಗರುಡನು ಹಾರಿಬಂದನು. ರಾಮನನ್ನು ಬಂಧನದಿಂದ ಬಿಡಿಸಿದನು.




5 ವೈಕುಂಠಕ್ಕೆ ಹಿಂದಿರುಗಿದ ಗರುಡನಿಗೆ ಈ ಯಶಸ್ಸಿನಿಂದ ಅಹಂಕಾರ ಬಂತು.








7 ಗರುಡ ಬ್ರಹ್ಮಲೋಕಕ್ಕೆ ಹೋಗಿ, ಸೃಷ್ಟಿಕರ್ತನಾದ ಬ್ರಹ್ಮನಿಗೆ ಅದೇ ಪ್ರಶ್ನೆಯನ್ನು ಕೇಳುತ್ತಾನೆ...



**8** ಭಗವಾನ್ ಶಿವನು ತನ್ನ ನೆರೆಯವನಾದ ಕುಬೇರನ ಬಳಿಗೆ ಹೋಗುತ್ತಿದ್ದ. ಗರುಡ ಅವನನ್ನು ದಾರಿಯ ಮಧ್ಯದಲ್ಲಿ ಭೇಟಿಮಾಡಿ ತನ್ನ ಸಂದೇಹವನ್ನು ತೋಡಿಕೊಂಡನು.




**9** ಭಗವಾನ್ ಶಿವನ ಆದೇಶದಂತೆ ಗರುಡನು ನೀಲಾಚಲಕ್ಕೆ ಹಾರಿಹೋದನು. ಅಲ್ಲಿನ ಒಂದು ಅಶ್ವತ್ಥ ವೃಕ್ಷದ ಕೆಳಗೆ ಕಾಕಭುಷುಂಡಿಯು ಮನೋಹರವಾಗಿ ಭಗವಾನ್ ವಿಷ್ಣುವಿನ ಕೀರ್ತನೆಯನ್ನು ಮಾಡುತ್ತಿದ್ದುದನ್ನು ಕಂಡನು. ಕಾಕಭುಷುಂಡಿಯ ಸುತ್ತಲೂ ಪಕ್ಷಿಗಳು ನೆರೆದು ಬಹಳ ಭಕ್ತಿಯಿಂದ ವಿಷ್ಣುವಿನ ಕಥೆಗಳನ್ನು ಕೇಳುತ್ತಿದ್ದವು.

**10** ಈ ದಿವ್ಯ ವಾತಾವರಣವು ಗರುಡನ ಹೃದಯದಲ್ಲಿಯೂ ಭಕ್ತಿಭಾವವನ್ನು ಉಂಟುಮಾಡಿತು. ಅವನು ಹತ್ತಿರದ ನೀರಿನ ಝರಿಯಲ್ಲಿ ಸ್ನಾನ ಮಾಡಿಕೊಂಡು ಬಂದನು. ಈಗ ಅವನು ಉನ್ನತ ದಿವ್ಯಭಾವವನ್ನು ಹೊಂದಿದ್ದನು.

